ಸತ್ರ ಪ್ರಕರಣ ಸಂಖ್ಯೆ: 4/2024

| | |
|---|---|
| ಪ್ರಾಸಾ | 07 |
| ಚಾಸಾ | 01 |

ಕರ್ನಾಟಕ ಸರ್ಕಾರ (ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ:57)
ನಮೂನೆ ಸಂಖ್ಯೆ 4
(ಸಿವಿಲ್)

**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ**

**ಸತ್ರ ಪ್ರಕರಣ ಸಂಖ್ಯೆ: 4/2024**

**ದಿನಾಂಕ: 16.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಿತು.**

| | | |
|---|---|---|
| ಸಾಕ್ಷಿದಾರರ ಹೆಸರು | : | ಸಿ.ಎಂ.ಮೂರ್ತಿ |
| ತಂದೆಯ ಹೆಸರು | : | ಲೇಟ್. ಮುಸಿಯಪ್ಪ |
| ವಯಸ್ಸು | : | 39 ವರ್ಷ |
| ಉದ್ಯೋಗ | : | ಕೂಲಿ ಕೆಲಸ |
| ವಾಸಸ್ಥಳ | : | ಚಿಕ್ಕಕಿರುಗಂಬಿ |

**ಮುಖ್ಯ ವಿಚಾರಣೆ: ಸಾರ್ವಜನಿಕ ಅಭಿಯೋಜಕರಿಂದ:-**

1. ಚಾಸಾ-2,ಚಾಸಾ -3, ಪ್ರಾಸಾ-1 ರಿಂದ 6 ರವರ ಪರಿಚಯ ಇದೆ. ನ್ಯಾಯಾಲಯದ ಮುಂದಿರುವ 1 ಮತ್ತು 2 ನೇ ಆರೋಪಿತರ ಪರಿಚಯ ಇದೆ.

2. ನಾನು ಈ ಪ್ರಕರಣದಲ್ಲಿ ದೂರು ನೀಡಿರುವುದಿಲ್ಲ. ಆದರೆ ಸಾಕ್ಷಿಯು ದಿ: 19.03.2021 ರಲ್ಲಿನ ದೂರಿನಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಸಹಿಯನ್ನು ನಿಶಾನೆಕರಿಸುವ ಸಲುವಾಗಿ ನಿಪಿ 12 ಎಂದು, ಆದರಲ್ಲಿರುವ ಸಾಕ್ಷಿ

| | |
|---|---|
| ಪ್ರಾಸಾ | 07 |
| ಚಾಸಾ | 01 |

ಸಹಿಯನ್ನು ನಿಪಿ 12(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ 2 ರಲ್ಲಿರುವ ಸಾಕ್ಷಿ ಸಹಿಯನ್ನು ನೋಡಿ ಗುರುತಿಸಿದ್ದು, ಅದರಲ್ಲಿರುವ ಸಾಹಿಯನ್ನು ನಿಪಿ 2(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ 3,4,7,8 ಪೊಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಪೊಟೋಗಳನ್ನು ಊರಿನಲ್ಲಿ ಗಲಾಟೆಯಾಗಿತ್ತು. ಅಲ್ಲಿಗೆ ಊರಿನವರೆಲ್ಲಾ ಹೋಗಿದ್ದರು, ನಾನು ಸಹ ಅಲ್ಲಿಗೆ ಹೋಗಿದ್ದೆ, ಆ ಸಮಯ ಪೊಲೀಸರು ಪೊಟೋಗಳನ್ನು ತೆಗೆದಿರುತ್ತಾರೆ. ನಿಪಿ 2 ಮತ್ತು 12 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ಹೇಳಿದ ಮೇರೆಗೆ ಸಹಿ ಮಾಡಿರುತ್ತೇನೆ. ನಾನು ನ್ಯಾಯಾಲಯದ ಮುಂದಿರುವ ಆರೋಪಿತರ ವಿರುದ್ಧ ಯಾವುದೇ ದೂರು ನೀಡಿರುವುದಿಲ್ಲ. ಸದರಿ ದೂರಿನಲ್ಲಿ 1ನೇ ಆರೋಪಿಯ ಅತ್ತಿಗೆಯೊಂದಿಗೆ ನಾನು ಫೋನ್ ನಲ್ಲಿ ಮಾತನಾಡಿದ ಹಿನ್ನಲೆಯಲ್ಲಿ ಆರೋಪಿತರು ನನ್ನ ಮೇಲೆ ದ್ವೇಷ ಸಾಧಿಸಿ ರಾತ್ರಿ ಹೊತ್ತಿನಲ್ಲಿ ನಮ್ಮ ಮನೆಯ ಬಳಿ ಬಾಂಬ್ ಸಿಡಿಸಿದ್ದಾರೆಂದು ಹೇಳಿ ದೂರು ನೀಡಿರುವುದಿಲ್ಲ.

**(ಈ ಹಂತದಲ್ಲಿ ವಿಶೇಷ ಸಾರ್ವಜನಿಕ ಅಭಿಯೋಜಕರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದರು. ಅಭಿಯೋಜಕರಿಗೆ ಅನುಮತಿ ನೀಡಲಾಯಿತು.)**

| | |
|---|---|
| ಪ್ರಾಸಾ | 07 |
| ಚಾಸಾ | 01 |

<u>**ಪಾಟೀ ಸವಾಲುಃ ವಿಶೇಷ ಸಾರ್ವಜನಿಕ ಅಭಿಯೋಜಕರಿಂದಃ-**</u>

3. ದಿಃ 18.03.2021 ರಂದು ಸಂಜೆ 5.30 ಗಂಟೆ ಸಮಯದಲ್ಲಿ ನಮ್ಮ ಜಮೀನಿನ ಬಳಿ ನಿಂತಿದ್ದಾಗ ಕೆಲಸವನ್ನು ಮುಗಿಸಿಕೊಂಡು, ಆ ಸಮಯದಲ್ಲಿ ನಮ್ಮೂರಿನ 1 ನೇ ಆರೋಪಿ ಪ್ರತಾಪ ಕೈಯಲ್ಲಿ ಮಚ್ಚನ್ನು ಹಿಡಿದುಕೊಂಡು ನನ್ನನ್ನು ಕುರಿತು ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದನು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ನನ್ನನ್ನು ಏಕೆ ಬೈಯುತ್ತಿದಿದ್ದಿರಿ ಎಂದು ಪ್ರತಾಪ್ ರವರನ್ನು ಕೇಳಿದಾಗ ನೀನು ನಮ್ಮ ಅತ್ತಿಗೆ ಸವಿತಮ್ಮರವರಿಗೆ ಪೋನ್ ಮಾಡಿ ಅವರ ಜೊತೆ ಮಾತನಾಡುತ್ತೀಯಾ ಎಂದು ಹೇಳಿ ನನ್ನ ಮಗನೇ ನಿನ್ನನ್ನು ಸಾಯಿಸುತ್ತೇನೆಂದು ಕೈಯಲ್ಲಿದ್ದ ಮಚ್ಚಿನಿಂದ ನನಗೆ ಎಡಭುಜಕ್ಕೆ ಹೊಡೆದನು ಎಂದರೆ ಸರಿಯಲ್ಲ. ಅಷ್ಟರಲ್ಲಿ ನಾನು ನನ್ನ ಎಡಕೈಯನ್ನು ಅಡ್ಡ ಇಟ್ಟಾಗ ರಕ್ತಗಾಯವಾಗಿತ್ತು ಎಂದರೆ ಸರಿಯಲ್ಲ. ಅಷ್ಟರಲ್ಲಿ ಚಾಸಾ-2,3, ಪ್ರಾಸಾ-5 ಮತ್ತು ಪ್ರಾಸಾ-6 ರವರು ಅಡ್ಡ ಹೋಗಿ ಜಗಳ ಬಿಡಿಸಿ ಬೆಳಿಗ್ಗೆ ಮಾತನಾಡೋಣ ಎಂದು ಅವನಿಗೆ ಬುದ್ದಿ ಹೇಳಿ ಕರೆದುಕೊಂಡು ಹೋದರು ಎಂದರೆ ಸರಿಯಲ್ಲ. ಪ್ರತಾಪನು ಬರುವಾಗ ನಿನ್ನನ್ನು ಬಿಡುವುದಿಲ್ಲ, ಮತ್ತೆ ಬರುತ್ತೇನೆಂದು ಹೇಳಿ ಹೋದನು ಎಂದರೆ ಸರಿಯಲ್ಲ. ಪುನಃ ರಾತ್ರಿ ಸುಮಾರು 9.30 ಗಂಟೆ ಸಮಯದಲ್ಲಿ ಪ್ರತಾಪ ಆ ನನ್ನ ಮಗನನ್ನು

| | |
|---|---|
| ಪ್ರಾಸಾ | 07 |
| ಚಾಸಾ | 01 |

ಇವತ್ತು ಬಿಡುವುದಿಲ್ಲ ಸಾಯಿಸುತ್ತೇನೆಂದು ತನ್ನ ಕೈಯಲ್ಲಿದ್ದ ಒಂದು ವಸ್ತುವನ್ನು ಎಸೆದು ಹೋದನು ಅದು ಏನೆಂದು ಕತ್ತಲಿನಲ್ಲಿ ಗೊತ್ತಾಗಲಿಲ್ಲ ಎಂದರೆ ಸರಿಯಲ್ಲ. ನಂತರ ದಿಃ 19.03.2021 ರಂದು ಬೆಃ 6.10 ಗಂಟೆ ಸಮಯದಲ್ಲಿ ನಮ್ಮ ಮನೆಯ ಮುಂದೆ ಜೊರಾದ ಶಬ್ದ ಕೇಳಿ ಬಂದಿತ್ತು ಎಂದರೆ ಸರಿಯಲ್ಲ. ಪ್ರಾಸಾ-6 ರವರ ಸಾಕು ನಾಯಿ ಸತ್ತು ಹೋಗಿತ್ತು ಎಂದರೆ ಸರಿಯಲ್ಲ. ಆ ವಿಚಾರ ವಾಗಿ 1ನೇ ಆರೋಪಿಯ ವಿರುದ್ದ ದೂರನ್ನು ಕೊಟ್ಟಿದ್ದೆ ಎಂದರೆ ಸರಿಯಲ್ಲ. ದೂರು ಕೊಟ್ಟ ಹಿನ್ನಲೆಯಲ್ಲಿ ಪೊಲೀಸರು ನನ್ನನ್ನು ಕರೆಯಿಸಿ ನಾನು ತೋರಿಸಿದಂತೆ ಸ್ಥಳದಲ್ಲಿ ನಿಪಿ 2 ರಂತೆ ಮಹಜರ್ ತಯಾರಿಸಿ, ಮಹಜರ್ ಅಡಿಯಲ್ಲಿ ಸುಟ್ಟಿರುವ ರಕ್ತ ಮಿಶ್ರಿತ ಹುಲ್ಲು, ರಕ್ತದ ಕಲೆಯಾಗಿರುವ ಮಣ್ಣು, ನಾಡಬಾಂಬ್ ನ್ನು ಸುತ್ತಲು ಬಳಸಿರುವ ದಾರವನ್ನು ಈ ದಿನ ನ್ಯಾಯಾಲಯದ ಮುಂದಿರುವ ವಸ್ತುಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದರು ಎಂದರೆ ಸರಿಯಲ್ಲ. ಆ ಸಮಯ ನಿಪಿ 3,4,7,8 ರಂತೆ ಪೊಟೋಗಳನ್ನು ತೆಗೆದಿದ್ದರು ಎಂದರೆ ಸರಿಯಲ್ಲ. ಆ ಬಗ್ಗೆ ನಾನು ದಿಃ 20.01.2023 ರಂದು "ದಿಃ 19.03.2021 ರಂದು ------------------------------------ ಮರುಹೇಳಿಕೆ ನೀಡಿರುತ್ತೇನೆ" ಎಂದು ಈಗ ಓದಿ ಹೇಳಿದಂತೆ ನಿಪಿ 13 ರಂತೆ ತನಿಖಾಧಿಕಾರಿಗೆ ಹೇಳಿಕೆ ನೀಡಿದ್ದೆ ಎಂದರೆ ಸರಿಯಲ್ಲ. ನಾನು ಆರೋಪಿತರೊಂದಿಗೆ

| | |
|---|---|
| ಪ್ರಾಸಾ | 07 |
| ಚಾಸಾ | 01 |

ರಾಜಿಯಾಗಿರುವ ಕಾರಣ ಎಲ್ಲಾ ವಿಚಾರ ಗೊತ್ತಿದ್ದರೂ ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು: ಆರೋಪಿ ಪರ ಶ್ರೀ. ಹೆಚ್.ಸಿ.ಎಂ. ವಕೀಲರಿಂದ:</u>**

ಇರುವುದಿಲ್ಲ.

**<u>ಮರುವಿಚಾರಣೆ: ಇಲ್ಲ.</u>**

**(ದಿನಾಂಕ: 16.03.2026 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓದಿ ಹೇ ಕೇ ಸರಿ ಇದೆ**

**ಸಹಿ/-**

**(ಕಾಂತರಾಜು.ಎಸ್.ವಿ.)**
**1 ನೇ ಹೆಚ್ಚುವರಿ ಜಿಲ್ಲಾ ಮತ್ತು (ವಿಶೇಷ) ಸತ್ರ ನ್ಯಾಯಾಧೀಶರು,**
**ಚಿಕ್ಕಬಳ್ಳಾಪುರ.**